

# ಪಾತ್ರಗಳು

ರಾಜಕುಮಾರ ಕುಲಕರ್ಣಿ

'ರೀ ಪದ್ಮನಾಭ ನನ್ನನ್ನು ಆ ಮುದಿ ಪ್ರೊಫೆಸರ್‌ಗೆ ಗಂಟು ಹಾಕಿದಿರಲ್ಲ. ನಿಮಗೆ ಗೊತ್ತಾ, ಆತನಿಗೆ ನನ್ನ ವಯಸ್ಸಿನ ಮಗ ಇದ್ದ. ಅವನ ಪಾಂಡಿತ್ಯಕ್ಕೆ ಮರುಳಾಗಿ ಮದುವೆ ಆಗ್ತೀಯಾ ಅಂತ ಕೇಳಿದ ತಕ್ಷಣ ನಾನು ಒಪ್ಪಿಕೊಂಡು ಬಿಟ್ಟೆ ಅಂತ ಬರೆದಿದ್ದೀರಿ. ಅದು ಹೇಗೆ ನನ್ನ ಮನಸ್ಸಿನಲ್ಲಿ ಏನಿದೆ ಅಂತ ತಿಳಿಕೊಳ್ಳದೆ ನೀವೇ ಒಂದು ನಿರ್ಧಾರಕ್ಕೆ ಬರ್ತೀರಿ. ನನಗಂತೂ ನಿಮ್ಮ ಕಥೆ ಓದಿ ನಿಮ್ಮ ಮೇಲೆ ಅಸಾಧ್ಯ ಸಿಟ್ಟು ಬಂತು'.

ಕಥಾಸಂಕಲನದಲ್ಲಿನ ತನ್ನ ಕಥೆಯೊಂದನ್ನು ಓದುತ್ತಿದ್ದ ಪದ್ಮನಾಭ ಧ್ವನಿ ಬಂದ ದಿಕ್ಕಿನತ್ತ ದೃಷ್ಟಿ ಹೊರಳಿಸಿದ. ಟೇಬಲ್ ಲ್ಯಾಂಪಿನಿಂದ ಹೊರಸೂಸುತ್ತಿದ್ದ ಬೆಳಕಿನ ವಿನಾ ಇಡೀ ಕೋಣೆಯ ತುಂಬ ಕತ್ತಲು ಗವ್ವೆಂದು ತುಂಬಿಕೊಂಡಿತ್ತು. ದೃಷ್ಟಿಗೆ ಯಾರೂ ಗೋಚರಿಸದೆ ಒಂದು ಕ್ಷಣ ತಬ್ಬಿಬ್ಬಾದ. ಕೋಣೆಯ ಲೈಟ್ ಹತ್ತಿಸಿ ಸುತ್ತಲೂ ಕಣ್ಣಾಡಿಸಿದ. ತಾನು ಕೇಳಿದ ಧ್ವನಿ ತನ್ನ ಭ್ರಮೆಯಾಗಿರಬಹುದು ಎಂದು ಮನಸ್ಸಿಗೆ ಸಮಾಧಾನ ತಂದುಕೊಂಡು ಕೋಣೆಯ ದೀಪ ಆರಿಸಿ ಅರ್ಧಕ್ಕೆ ನಿಲ್ಲಿಸಿದ್ದ ಕಥೆಯನ್ನು ಮತ್ತೆ ಓದಲಾರಂಭಿಸಿದ.

'ರೀ ಪದ್ಮನಾಭ, ನಾನು ವಸುಮತಿ ಕಣ್ರೀ. ನಿಮ್ಮ ಇಜ್ಜೋಡು ಕಥೆಯ ದುರಂತ ನಾಯಕಿ ನಾನು. ಪಾತ್ರ ಬರೆಯುವಾಗ ತಲ್ಲೀನರಾಗಿ ನನ್ನನ್ನು ಮನಸ್ಸಿನ ಒಳಗೆ ಭಾವನಾತ್ಮಕವಾಗಿ ಬಿಟ್ಟುಕೊಂಡವರಿಗೆ ಈಗ ಅಪರಿಚಿತಳಾದೆ ಏನ್ರೀ. ಈ ಪಾತ್ರಗಳ ಹಣೆಬರಹವೇ ಇಷ್ಟು. ಕಥೆಯೊಂದು ಪ್ರಕಟವಾಗಿ ಕಥೆಗಾರ ಮತ್ತೊಂದು ಕಥೆಯ ರಚನೆಗೆ ತೊಡಗಿದ ತಕ್ಷಣ ಹಿಂದಿನ ಕಥೆಯ ಪಾತ್ರಗಳೆಲ್ಲ ಅವನ ನೆನಪಿನ ಕೋಶದಿಂದ ಮರೆಯಾಗಿ ಬಿಡುತ್ತವೆ. ಪಾಪ ನೀವಾದರೂ ಎಷ್ಟು ಪಾತ್ರಗಳನ್ನ ನೆನಪಿನಲ್ಲಿಟ್ಟುಕೊಳ್ಳೋದಕ್ಕೆ ಸಾಧ್ಯ ಹೇಳಿ. ಆದರೂ ಒಂದು ಮಾತು ಕೇಳ್ತೀನಿ, ಕಥೆ ಬರೆಯುವಾಗ ಪಾತ್ರಗಳ ಒಪ್ಪಿಗೆ ಪಡೀತೀರೊ ಇಲ್ಲ ನೀವೇ ಒಂದು ನಿರ್ಧಾರಕ್ಕೆ ಬರ್ತೀರೋ'.

ಈ ಸಲ ಪದ್ಮನಾಭ ತನ್ನ ದೃಷ್ಟಿಯನ್ನು ಹೊರಳಿಸದೆ ಓದುತ್ತಿರುವ ಇಜ್ಜೋಡು ಕಥೆಯ ಪುಟವನ್ನೇ ದಿಟ್ಟಿಸಿ ನೋಡಲಾರಂಭಿಸಿದ.

'ಕೊನೆಗೂ ನನ್ನ ಪತ್ತೆ ಹಚ್ಚಿದಿರಲ್ಲ. ಹೌದು ರೀ, ನಿಮ್ಮ ಈ ಕಥೆಯ ಒಳಗಿನಿಂದಲೇ ನಾನು ಮಾತಾಡ್ತಿರೋದು. ನನ್ನನ್ನು ಪ್ರೊಫೆಸರ್ ಬದರಿನಾಥರ ಜೊತೆ ಮದುವೆ ಮಾಡಿಸಿ ಕೊನೆಗೆ ಮನೆಯಿಂದ ದಬ್ಬಿಸಿಕೊಂಡು ಹೊರಹೋಗುವಂತೆ ಮಾಡಿದೀರಿ. ಅಲ್ಲ, ಮುಂದೆ ನಾನು ಎಲ್ಲಿ ಹೋದೆ ಅಂತ ಓದುಗರಿಗೆ ಒಂದು ಸಣ್ಣ ಕುತೂಹಲ ಆದರೂ ಇರಬೇಕಲ್ಲ. ಹಾಗಾದರೆ ನನ್ನನ್ನು ಅಂಥ ಅಪರಾತ್ರಿಯಲ್ಲಿ ಮನೆಯಿಂದ ಎಲ್ಲಿಗೆ ಕಳಿಸಿದಿರಿ. ನನಗಂತೂ ಎಲ್ಲಿ ಹೋದೆ ಅಂತ ಗೊತ್ತಿಲ್ಲ. ಕಥೆ ಬರೆದ ನಿಮಗಾದರೂ ಗೊತ್ತಿರಬೇಕಲ್ಲ. ಕುತೂಹಲಕ್ಕೆಂದು ಕೇಳುತ್ತಿದ್ದೀನಿ, ಹೇಳಿ ಮತ್ತೆ'.

ವಸುಮತಿಯ ಧ್ವನಿಯಲ್ಲಿನ ಆರೋಪದ ಧಾಟಿಗೆ ಪದ್ಮನಾಭ ಒಂದು ಕ್ಷಣ ಬೆಚ್ಚಿದ. ಮಾತನಾಡಬೇಕೆಂದು ಪ್ರಯತ್ನಿಸಿದವನಿಗೆ ಗಂಟಲಿನಿಂದ ಧ್ವನಿಯೇ ಹೊರಡಲಿಲ್ಲ. ವಸುಮತಿ ಮತ್ತೆ ಮಾತನಾಡಬಹುದೆಂದು ಒಂದಿಷ್ಟು ಹೊತ್ತು ಕಾದು ಕುಳಿತವನಿಗೆ ನಿದ್ದೆ ಆವರಿಸಿದಂತಾಗಿ ಕಥೆಯ ಪುಸ್ತಕವನ್ನು ಟೇಬಲ್ ಮೇಲಿಟ್ಟು ಹೋಗಿ ಮಂಚದ ಮೇಲೆ ಮಲಗಿದ.

***

ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿ ಎರಡನೇ ದರ್ಜೆ ಗುಮಾಸ್ತನಾಗಿ ಕೆಲಸ ಮಾಡುತ್ತಿರುವ ಪದ್ಮನಾಭನಿಗೆ ಸಾಹಿತ್ಯದ ಬಗ್ಗೆ ಒಲವಿದೆ. ಅವನು ಬರೆದ ಲೇಖನಗಳು ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿ ಓದುಗರ ಗಮನ ಸೆಳೆದಿವೆ. ವಿಶ್ವವಿದ್ಯಾಲಯದ ಸಹೋದ್ಯೋಗಿಗಳ ವಲಯದಲ್ಲಿ ಮತ್ತು ಪರಿಚಿತರಲ್ಲಿ ಅವನನ್ನು ಉದಯೋನ್ಮುಖ ಬರಹಗಾರನೆಂದು ಗುರುತಿಸಲಾಗಿದೆ. ಹಾಗೆ ನೋಡಿದರೆ, ಪದ್ಮನಾಭನ ಮನೆತನದಲ್ಲಿ ಬರೆಯುವ ಹವ್ಯಾಸ ಯಾರಿಗೂ ಇರಲಿಲ್ಲ. ಬರೆಯುವುದಿರಲಿ, ಕಥೆ ಲೇಖನಗಳನ್ನು ಓದಿ ಕೂಡ ಗೊತ್ತಿಲ್ಲದ ಮನೆತನದ ಹಿನ್ನೆಲೆಯ ಪದ್ಮನಾಭನಿಗೆ ತನಗೆ ಬರವಣಿಗೆಯ ಕಲೆ ಹೇಗೆ ಒಲಿಯಿತೆಂದು ಅನೇಕ ಸಲ ಆಶ್ಚರ್ಯವಾಗಿದ್ದುಂಟು. ಸ್ನೇಹಿತ ಶೇಷಗಿರಿಯ ಎದುರು ಈ ವಿಷಯವನ್ನು ಪ್ರಸ್ತಾಪಿಸಿದಾಗಲೆಲ್ಲ, 'ಪದ್ಮನಾಭ, ಅಪ್ಪ ಅಮ್ಮನ ಜೀನ್ಸ್ ಮೂಲಕ ಹರಿದು ಬರಲು ಬರವಣಿಗೆಯೇನು ರೋಗ ಅಂದುಕೊಂಡಿರುವೆಯೇನಯ್ಯ' ಎಂದು ದೊಡ್ಡದಾಗಿ ನಗುತ್ತಾನೆ. ಆಗೆಲ್ಲ ಪದ್ಮನಾಭ ಶೇಷಗಿರಿಯ ಮುಖವನ್ನು ಪೆಕರು ಪೆಕರಾಗಿ ನೋಡುತ್ತ ನಿಲ್ಲುತ್ತಾನೆ.

ಈ ನಡುವೆ ಪದ್ಮನಾಭನಿಗೆ ಕಥೆ ಬರೆಯಬೇಕೆನ್ನುವ ಆಸೆ ತೀವ್ರವಾಗಿ ಕಾಡತೊಡಗಿದಾಗ ತನ್ನ ಕಲ್ಪನೆಯಲ್ಲಿ ಕಥೆ ಹೆಣೆದು ಅಕ್ಷರಕ್ಕಿಳಿಸಿದ. ಅವನು ಬರೆದ ಕಥೆಯ ಭಾವಾರ್ಥ ಹೀಗಿದೆ: ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊಫೆಸರ್ ಬದರಿನಾಥರಿಗೆ ತಮ್ಮ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಮಾಡುತ್ತಿದ್ದ ವಸುಮತಿಯ ಮೇಲೆ ಮನಸಾಗಿದೆ. ಮೊಮ್ಮಕ್ಕಳನ್ನು ಕಂಡಿರುವ ವೃದ್ಧ ಬದರಿನಾಥರ ಪಾಂಡಿತ್ಯಕ್ಕೆ ಮಾರುಹೋಗಿ ವಸುಮತಿ ಅವರನ್ನು ವರಿಸಲು ಒಪ್ಪಿಕೊಳ್ಳುತ್ತಾಳೆ. ಬದರಿನಾಥರ ಎರಡನೇ ಮದುವೆಯ ವಿಷಯ